ವಿಷಯ: ಮನ್ನಾಳಿಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ 372 (2011)

ಶ್ರೀ ನಾರಾಯಣ / ಮನ್ನಾಳಿ (ಬೀದರ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಬೀದರ್ ತಾಲ್ಲೂಕಿನ ಮನ್ನಾಳಿಯಲ್ಲಿರುವ ಪ್ರಸ್ತುತ ಆಸ್ಪತ್ರೆಯು ಸುತ್ತಮುತ್ತಲಿನ 35,000 ಜನಸಂಖ್ಯೆಯುಳ್ಳ 16 ಗ್ರಾಮಗಳಿಗೆ, ಕನಿಷ್ಠ ವೈದ್ಯಕೀಯ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಇ) ಯಾವಾಗ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ನಾರಾಯಣರಾವ್, ಮನ್ನಾಳಿ :- ಮಾನ್ಯ ಅಧ್ಯಕ್ಷರೇ, ಸರಿಯಾದಂಥ ಉತ್ತರವನ್ನು ಮಾನ್ಯ ಮಂತ್ರಿಯವರು ಕೊಟ್ಟಿಲ್ಲ. ಏಕೆಂದರೆ, ಬೀದರ್ ತಾಲ್ಲೂಕಿನ ಮನ್ನಾಳಿಯಲ್ಲಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಮಾಡಬಹುದೇ ಎಂದು ನಾನು ಕೇಳಿದ್ದೇನೆ. 'ಇಲ್ಲ'ವೆಂದು ಹೇಳಿದ್ದಾರೆ. ಅಲ್ಲಿ ಬಹುಶಃ 35 ಸಾವಿರ ಪಾಪ್ಯುಲೇಷನ್ ಇರತಕ್ಕಂಥ, ಸುತ್ತಮುತ್ತ 16 ಗ್ರಾಮಗಳಿವೆ. ಮನ್ನಾಳಿಯಲ್ಲಿರತಕ್ಕಂಥ ಆಸ್ಪತ್ರೆಯನ್ನು ನೀವು ಏಕೆ ಮೇಲ್ದರ್ಜೆಗೆ ಏರಿಸಬಾರದು ? ಅಲ್ಲಿರತಕ್ಕಂಥ 16 ಹಳ್ಳಿ ಜನರು ಖಾಯಿಲೆ ಬಂದರೆ ಬೀದರ್‌ಗೆ ಹೋಗಬೇಕಾಗುತ್ತದೆ. ಆ ಗ್ರಾಮದಲ್ಲಿರತಕ್ಕಂಥ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿದರೆ ಏನು ತೊಂದರೆ ? ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಏಕೆ ಮಾಡಬಾರದೆಂದು ನನ್ನ ಪ್ರಶ್ನೆ. ಮಾನ್ಯ ಮಂತ್ರಿಗಳಿಗೆ ಅದನ್ನು ಅಪ್‌ಗ್ರೇಡ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಪ್ರಶ್ನೆ, ಕನಿಷ್ಠ ವೈದ್ಯಕೀಯ ಸವಲತ್ತುಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಎಂದು ಕೇಳಿದ್ದಾರೆ. ಸರ್ಕಾರದ ವತಿಯಿಂದ ಇಲ್ಲವೆಂದು ಹೇಳಿದ್ದೇವೆ. ಅಲ್ಲಿರತಕ್ಕಂಥ ಪ್ರಾಥಮಿಕ ಕೇಂದ್ರ 6 ಹಾಸಿಗೆಯುಳ್ಳಂಥಾದ್ದು ಅದು ತನ್ನದೇ ಆದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದೆ. ವರ್ಷಕ್ಕೆ ಸುಮಾರು 30 ಸಾವಿರಕ್ಕೂ ಹೆಚ್ಚು ಔಷಧಿಗಳನ್ನು ಅಲ್ಲಿಗೆ ಕೊಡುತ್ತಿದ್ದೇವೆ. ಆದ್ದರಿಂದ ಕನಿಷ್ಠ ಸವಲತ್ತು ಆಗಿಲ್ಲ ಎನ್ನುವುದು ಸರಿಯಲ್ಲವೆಂದು ಹೇಳಿದ್ದೇನೆ. ಮತ್ತೊಂದು ಅವರು ಕೇಳಿದ್ದಾರೆ. 35 ಸಾವಿರ ಪ್ರಜಾ ಸಂಖ್ಯೆ ಇದೆ. 16 ಗ್ರಾಮಗಳು ಅದಕ್ಕೆ ಸುತ್ತಾ ಬರತಕ್ಕಂಥ ಹಿನ್ನೆಲೆಯಲ್ಲಿ ಏಕೆ ಮಾಡಬಾರದು ಎಂದೂ ಕೂಡ ಕೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾಪರಿಷತ್ತಿನವರು ಅವರ ಜಿಲ್ಲಾ ಯೋಜನೆಯಲ್ಲಿ ಹಣವನ್ನು ಕಾದಿಟ್ಟು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದರೆ ಅದನ್ನು ಕನ್ಸಿಡರ್ ಮಾಡಬಹುದು. ಆ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಪ್ರಯತ್ನ ಮಾಡಲಿ. ಸರ್ಕಾರಕ್ಕೆ ಪ್ರಸ್ತಾವನೆ ಬಂದ ನಂತರ ಇದನ್ನು ಪರಿಶೀಲಿಸಲಾಗುವುದು.

ಶ್ರೀ ನಾರಾಯಣರಾವ್ :- ಜಿಲ್ಲಾಪರಿಷತ್ತು ಮಾಡತಕ್ಕಂಥಾದ್ದು ತಮಗೆ ಗೊತ್ತಿದೆ. ಜಿಲ್ಲಾಪರಿಷತ್ತು ಬರಬೇಕಾದರೆ ಇನ್ನೂ ಕಾಲಾವಕಾಶ ಬಹಳಷ್ಟು ಇದೆ. ಮಾನ್ಯ ಆರೋಗ್ಯ ಮಂತ್ರಿಗಳು, ನಮ್ಮ ಆರೋಗ್ಯವನ್ನು ಕಾಪಾಡತಕ್ಕಂಥ ಕರ್ತವ್ಯ ತಮಗೆ ಇದೆ. ಆರೋಗ್ಯದ ವಿಷಯದ ಬಗ್ಗೆ ತಾವು ಗೌಣ ಮನಸ್ಸು ಮಾಡಿ ಇರತಕ್ಕಂಥ ಹಾಸ್ಪಿಟಲ್‌ನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಏನೂ ತೊಂದರೆ ಇಲ್ಲ. ಅಪ್‌ಗ್ರೇಡ್ ಮಾಡುತ್ತೇವೆಂದು ಆಶ್ವಾಸನೆ

ಕೊಟ್ಟರೆ ತೊಂದರೆ ಏನಿಲ್ಲವೆಂದು ನನಗನಿಸುತ್ತದೆ. 16 ಹಳ್ಳಿಗಳ ಜನರ ಆರೋಗ್ಯವನ್ನು ನೋಡಿಕೊಂಡು ಅಪ್‌ಗ್ರೇಡ್ ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಮಾನ್ಯ ಅಧ್ಯಕ್ಷರೇ, ಅಪ್‌ಗ್ರೇಡ್ ಮಾಡುವುದರಲ್ಲಿ ಸರ್ಕಾರದ ವಿರೋಧ ಏನಿಲ್ಲ. ಆದರೆ, ಅದಕ್ಕೆ ಬೇಕಾದಂಥ ನಿಯಮಗಳನ್ನು ನಾವು ಅನುಸರಿಸಬೇಕಾಗುತ್ತದೆ. ಜಿಲ್ಲಾಪರಿಷತ್ತಿನವರು ಅವರ ಆಯವ್ಯಯದಲ್ಲಿ ಜಿಲ್ಲಾ ಯೋಜನೆಯಲ್ಲಿ ಸೇರಿಸಿ ಒಳವಡಿಸಿ ಸರ್ಕಾರಕ್ಕೆ ಶಿಫಾರಸ್ ಮಾಡಿದಾಗ ಆ ಒಂದು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಉಪಾಧ್ಯಕ್ಷಿಣಿಯವರು:- ಶ್ರೀ ವೈ. ನಾಗಪ್ಪ, ನಿಮ್ಮ ಪ್ರಶ್ನೆಗೆ ಎಜುಕೇಷನ್ ಮಿನಿಸ್ಟರ್ ರಿಪ್ಲೈ ಕೊಡಬೇಕು. ಅವರು ಬಂದ ಮೇಲೆ ಇದನ್ನು ತೆಗೆದುಕೊಳ್ಳುತ್ತೇನೆ. ಶ್ರೀ ಎ. ಬಿ. ಮಲಕರೆಡ್ಡಿ, ನಿಮ್ಮ ಪ್ರಶ್ನೆಗೆ ಟೈಮ್ ಬೇಕೆಂದು ಕೇಳಿದ್ದಾರೆ. ಶ್ರೀ ಎಂ. ವಿ. ವೆಂಕಟಪ್ಪ : ಇದಕ್ಕೂ ಸಹಾ ಟೈಮ್ ಕೇಳಿದ್ದಾರೆ.

ವಿಷಯ: ನಿಮ್ಹಾನ್ಸ್ ಆಸ್ಪತ್ರೆಗೆ ಕನಿಷ್ಠ ತುರ್ತು ಸೌಲಭ್ಯಗಳನ್ನು ಕಲ್ಪಿಸುವುದು.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ 377 (2040)

ಶ್ರೀ ಬಿ. ಶಿವರಾಂ (ಗಂಡಸಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನಿಷ್ಠ ಸೌಲಭ್ಯಗಳೊಂದಿಗೆ 24 ಗಂಟೆಯೂ ನಿಮಾನ್ಸ್ ಆಸ್ಪತ್ರೆಯು ಕಾರ್ಯ ನಿರ್ವಹಿಸುತ್ತದೆಯೇ? ಹಾಗಿದ್ದಲ್ಲಿ ಕನಿಷ್ಠ ತುರ್ತು ಶುಶ್ರೂಷೆಗೆ ಒದಗಿಸಿರುವ ಸೌಲಭ್ಯಗಳು ಯಾವುವು ?

ಆ) 24 ಗಂಟೆಯೂ ರಕ್ತ ನಿಧಿ ಸ್ಕ್ಯಾನಿಂಗ್ ಮತ್ತು ಕ್ಷ-ಕಿರಣ ಘಟಕ ಮುಂತಾದುವುಗಳನ್ನು ಒದಗಿಸಲಾಗಿದೆಯೇ ?

ಇ) ಶುಲ್ಕವನ್ನು ವಿಧಿಸಿ ಅಥವಾ ವಿಧಿಸದೆಯೆ ಒಬ್ಬ ಮನುಷ್ಯನನ್ನು ಅಪಾಯದಿಂದ ಪಾರು ಮಾಡಲು ಸರ್ಕಾರವು ಮೇಲ್ಕಂಡ ಸೌಲಭ್ಯಗಳನ್ನು 24 ಗಂಟೆಯೂ ಒದಗಿಸಿಕೊಟ್ಟಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

24 ಗಂಟೆಯೂ ನಿಮಾನ್ಸ್ ಕಾರ್ಯ ನಿರ್ವಹಿಸುತ್ತದೆ. ಆ ಸಮಯದಲ್ಲಿ ಸೈಕಿಯಾಟ್ರಿಕ್, ನ್ಯೂರಾಲಜಿ, ಮತ್ತು ನ್ಯೂರೋ ಸರ್ಜರಿ ಸೌಲಭ್ಯಗಳು ದೊರೆಯುತ್ತವೆ. ರೋಗಿಗಳಿಗೆ ತುರ್ತು ವಿಭಾಗಕ್ಕೆ ಪ್ರವೇಶ ನೀಡುವುದರೊಂದಿಗೆ ವಿಶೇಷ ಡಾಕ್ಟರುಗಳಿಂದ ತುರ್ತು ಸೇವೆ ನೀಡಲಾಗುತ್ತಿದೆ. ಅಲ್ಲದೆ ತುರ್ತು ಶಸ್ತ್ರ ನೀಡಲಾಗುತ್ತಿದೆ. ಅಲ್ಲದೆ ತುರ್ತು ಶಸ್ತ್ರ ಚಿಕಿತ್ಸೆ ಸಹ ಕೈಗೊಳ್ಳಲಾಗುತ್ತದೆ. ಸಂಬಂಧಪಟ್ಟ ರೋಗಿಗೆ ಆಗತ್ಯವಾದ ಎಲ್ಲಾ ರೀತಿಯ ಚಿಕಿತ್ಸೆ ನೀಡಲಾಗುತ್ತದೆ.

ಆ) ಹೌದು.

ಇ) ಹೌದು.

ತುರ್ತು: ಆಕಸ್ಮಿಕ ಸೇವೆಗಳಿಗೆ ಯಾವುದೆ ರೀತಿಯ ಶುಲ್ಕ ಇರುವುದಿಲ್ಲ.

ಶ್ರೀ ಬಿ. ಶಿವರಾಂ :- ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಸರಿಯಾದ ರೀತಿಯಲ್ಲಿ ಒದಗಿಸಿದ್ದಾರೆ. ಬಹುಶಃ ನಾನು ಕೇಳುತ್ತಿರುವ ಉದ್ದೇಶ ಏನೆಂದು ಅರ್ಥ ಮಾಡಿಕೊಂಡಿದೆ. ಆ ಹಿನ್ನೆಲೆಯಲ್ಲಿ ಏನು ಸಮಸ್ಯೆ ಇದೆಯೆಂದು ಮಂತ್ರಿಗಳಿಗೆ ಗೊತ್ತಾಗುತ್ತದೆ. ಅಫಿಷಿಯಲ್ ಆಗಿ ಎಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ವ್ಯವಸ್ಥೆ ಇದೆ ಎನ್ನತಕ್ಕಂಥಾದ್ದು ನಿಜ. ಆದರೆ ಅನ್ ಅಫಿಷಿಯಲ್ ಆಗಿ ಏನು ನಡೆಯುತ್ತಿದೆ ಎನ್ನತಕ್ಕಂಥಾದ ರ ಹಿನ್ನೆಲೆಯನ್ನು ನಾವು ಅರ್ಥಮಾಡಿಕೊಳ್ಳ ಬೇಕು. ಸಾಮಾನ್ಯವಾಗಿ ಏನಾದರೂ ಆಕ್ಸಿಡೆಂಟ್ ಆಗಿ ದೂರದಿಂದ ಬಂದರೆ 12 ಗಂಟೆ